# ಆಹಾ ಸುದ್ದಿ!

★ ಸಸಿತೋಟ



ಟ್ಯುನಿಶಿಯಾದಲ್ಲಿರುವ ಗುಹೆಗಳಲ್ಲಿ ಈಗಲೂ ಅಲ್ಲಿಯ ಜನ ವಾಸಿಸುವ ಸಂಪ್ರದಾಯವಿಟ್ಟುಕೊಂಡಿದ್ದಾರೆ. ಆಧುನಿಕ ನಗರ, ಆಧುನಿಕ ಬದುಕು ಬೇಡವೆನ್ನುವ ಈ ಸಂಪ್ರದಾಯಸ್ಥರು ಈ ಗುಹೆ ಬಿಟ್ಟರೆ ಬದುಕೇ ಅಂತ್ಯವಾದಂತೆ ಎನ್ನುತ್ತಾರಂತೆ.




ಸಿಡ್ನಿಯಲ್ಲಿ ನಡೆದ 'ಅತ್ಯುತ್ತಮ ಮುಲ್ಲೆಟ್' ಹೇರ್‌ಕಟ್ ಸ್ಪರ್ಧೆಯಲ್ಲಿ ಶೇನ್ ಎಂಬಾತ ಪ್ರಶಸ್ತಿ ಮುಡಿಗೇರಿಸಿಕೊಂಡಿದ್ದಾನೆ. ಈ ರೀತಿಯ ಕೇಶ ಶೈಲಿ 70–80ರ ದಶಕದಲ್ಲಿ ಜನಪ್ರಿಯವಾಗಿದ್ದು, ಈಗ ಮತ್ತೆ ಎಂಟ್ರಿ ಕೊಟ್ಟಿದೆಯಂತೆ. ಬಾಲಿವುಡ್ ಸಂಗೀತ ನಿರ್ದೇಶಕ ಬಪ್ಪಿ ಲಹರಿ ಯಾವ ಕಾಲಕ್ಕೆ ಸೇರಿದವರು ಎಂಬ ಪ್ರಶ್ನೆಗೆ ಉತ್ತರ ಸಿಕ್ಕಿರಬಹುದು.

ಕಳೆದ ವಾರ ಫೇಸ್‌ಬುಕ್‌ನಲ್ಲಿ 'ಸೇವ್ ಸುಪ್ರಿಯಾ' ಎಂಬ ಹ್ಯಾಷ್‌ಟ್ಯಾಗ್ ಭಾರಿ ಸದ್ದು ಮಾಡಿತು. ಯಾವ ಸುಪ್ರಿಯಾ, ಯಾವ ರೀತಿಯ ಅಪಾಯದಲ್ಲಿದ್ದಾಳೆ? ಮುಂಬೈನ ಕಾಫಿ ಷಾಪ್‌ನಲ್ಲಿ ಅಮನ್ ಎಂಬ ಯುವಕ ತನ್ನ ಪ್ರಿಯತಮೆ ಸುಪ್ರಿಯಾ ಎಂಬಾಕೆಯನ್ನು ಇನ್ನೊಬ್ಬಳು ಹುಡುಗಿಗೋಸ್ಕರ ಬಿಟ್ಟುಬಿಡುವುದಾಗಿ ಗೆಳೆಯನಿಗೆ ಹೇಳಿದನಂತೆ. ಇದನ್ನು ಐಶ್ವರ್ಯ ಎಂಬಾಕೆ ಕೇಳಿಸಿಕೊಂಡು ಮುಂಬೈನಲ್ಲಿ ಎಷ್ಟೆಲ್ಲ ಸುಪ್ರಿಯಾ ಎನ್ನುವ ಹೆಸರಿನ ಯುವತಿಯರಿದ್ದಾರೆ ಎಂದು ಅಂತರ್ಜಾಲ ಜಾಲಾಡಿ, ಫೇಸ್ಬುಕ್ ಸ್ನೇಹಿತರ ನೆರವನ್ನೂ ಕೋರಿದ್ದಾಳಂತೆ. ಒಂದೊಳ್ಳೆ ಕೆಲಸಕ್ಕಾಗಿ ಕೈ ಜೋಡಿಸುವವರಿಗೇನು ಕಡಿಮೆಯೇ! 2000 ಮಂದಿ ಇದುವರೆಗೆ ನೆರವು ನೀಡಲು ಮುಂದಾಗಿದ್ದಾರಂತೆ..

ದುಬೈನಲ್ಲಿ ಸಮೀಹಾ ಎಂಬ ಯುವತಿ ಮದುವೆಯಾದ ನಲ್ವತ್ತು ದಿನಗಳಿಗೇ ತನ್ನ ಗಂಡನಿಂದ ವಿಚ್ಛೇದನ ಕೇಳಿದ್ದಾಳಂತೆ. ವಿಚ್ಛೇದನಕ್ಕೆ ಕಾರಣ ಶಾವರ್ಮಾ (ಮಾಂಸದ ರೋಲ್). ತಿರುಗಾಡಲು ಹೋದಾಗ ಶಾವರ್ಮಾ ಕೇಳಿದ್ದಕ್ಕೆ ಅದರ ಬದಲು ಹಣ್ಣಿನ ರಸ ಕೊಡಿಸಿದ ಎಂದು ಸಿಟ್ಟಿಗೆದ್ದ ಯುವತಿ ತನ್ನ ಗಂಡ ಎಷ್ಟು ಕಂಜೂಸ್ ಎಂದು ಆರೋಪ ಮಾಡಿದ್ದಾಳಂತೆ. ಶಾವರ್ಮಾಕ್ಕೆ ಕಿವಿಯಿದ್ದಿದ್ದರೆ ಪಾಪ ತನ್ನಿಂದಾದ ಪ್ರಮಾದಕ್ಕೆ ಅಲವತ್ತುಕೊಳ್ಳುತ್ತಿತ್ತು.



ಟರ್ಕಿಯಿಂದ ಮಾಸ್ಕೋಗೆ ಹೊರಟಿದ್ದ ವಿಮಾನದಲ್ಲಿ ಉಳಿದ ಪ್ರಯಾಣಿಕರು ಎ.ಸಿ.ಯಿಂದ ಬರುತ್ತಿದ್ದ ತಣ್ಣನೆ ಗಾಳಿಗೆ ಹಾಯಾಗಿ ಮುಖವೊಡ್ಡಿದ್ದರೆ ಈ ಮಹಾತಾಯಿ ತನ್ನ ಒಳ ಉಡುಪನ್ನು ಅಷ್ಟೇ ಹಾಯಾಗಿ ಒಣಗಿಸಿಕೊಂಡಳಂತೆ. ಎಲ್ಲಾ ಕಣ್ಣು ಬಿಟ್ಟುಕೊಂಡು ನೋಡಿದರೇ ಹೊರತು ಬಾಯಿ ಬಿಡಲಿಲ್ಲವಂತೆ. ನಮ್ಮಲ್ಲೂ ರೈಲು, ಬಸ್ಸಿನಲ್ಲಿ ಕೆಲವೊಮ್ಮೆ ಉಡುಪು ಒಣಗಿಸುವ ಕಾರ್ಯ ಓತಪ್ರೋತವಾಗಿ ನಡೆದರೂ, ಒಳ ಉಡುಪು ಚೀಲದ ಒಳಗೇ ನಾಚಿಕೆಯಿಂದ ಕೂತಿರುತ್ತದೆ.



ಎಡಿನ್‌ಬರ್ಗ್‌ನಲ್ಲಿ ಇತ್ತೀಚೆಗೆ ನಡೆದ ತಿರುಚಿಗರ ಸ್ಪರ್ಧೆಯಲ್ಲಿ ಸ್ಪರ್ಧಾಳು ರಷ್ಯಾದ ಯುವತಿ ಒಡ್ಕಾ. ದೇಹವನ್ನು ಹೇಗೆ ಬೇಕೋ ಹಾಗೆ ತಿರುಚಿ ಎಲ್ಲೆಂದರಲ್ಲಿ ತೂರಿಸುವ ಒಡ್ಕಾ ವೋಡ್ಕಾ ಬಾಟಲ್‌ನಲ್ಲೇ ತೂರಿಕೊಂಡಿದ್ದಾಳೆ. ಮಾತು ತಿರುಚುವ ಬದಲು ದೇಹ ತಿರುಚುವುದು ಅಪಾಯಕಾರಿಯಲ್ಲ ಅಲ್ಲವೇ!